**ಎಂಟನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ಮೈಸೂರು, ಹುಣಸೂರು ಪೀಠ.**

**SC No**.437/2022

**PW**. 5

**CW**. 5

**ಸಾಕ್ಷಿಯ ಹೆಸರು –ಗಿರೀಶ ಹೆಚ್ ಆರ್**

**ತಂದೆಯ ಹೆಸರು –ರಾಮಕೃಷ್ಣ ನಾಯಕ**

**ವಯಸ್ಸು – 41 ವರ್ಷಗಳು** ದಿನಾಂಕ 03–09–2025 ರಂದು ಪ್ರಮಾಣವಚನ ಬೋಧಿಸಲಾಯಿತು.

**ಉದ್ಯೋಗ –ಸರ್ಕಾರಿ ನೌಕರರು , ಆರೋಗ್ಯ ಇಲಾಖೆ**

**ವಾಸಸ್ಥಳ –ಹೆಬ್ಬಾಲೆ , ಕುಶಾಲನಗರ ತಾಃ**

**ಮುಖ್ಯ ವಿಚಾರಣೆಃ– ಸರ್ಕಾರಿ ಅಭಿಯೋಜಕರಿಂದಃ–**

ಮೃತ ಗೋಪಿಕೃಷ್ಣ ನನ್ನ ಸ್ನೇಹಿತ . 1 ನೇ ಆರೋಪಿಯ ಜೊತೆ ಗೋಪಿಕೃಷ್ಣನ ಮದುವೆ ಆಗಿತ್ತು. ಅವರಿಬ್ಬರ ಮದುವೆಯಾದ ನಂತರ ಗೋಪಿಕೃಷ್ಣ ಬೆಂಗಳೂರಿನಲ್ಲಿ ಕೆಲಸ ಮಾಡಿಕೊಂಡು ವಾಸವಾಗಿದ್ದ. ಗೋಪಿಕೃಷ್ಣ ತನ್ನ ವೈವಾಹಿಕ ಸಂಬಂಧದ ಬಗ್ಗೆ ನನ್ನ ಮುಂದೆ ಏನು ಹೇಳಿಕೊಳ್ಳುತ್ತಿರಲಿಲ್ಲ. ಗೋಪಿಕೃಷ್ಣ ಮದುವೆಯಾದ ನಂತರ ಕುಷಿಯಾಗಿರಲಿಲ್ಲ.

2019 ನೇ ಸಾಲಿನಲ್ಲಿ ಗೋಪಿಕೃಷ್ಣ ಮೃತಪಡುವ ದಿನ ಸಂಜೆ ಗೋಪಿಕೃಷ್ಣ ನನಗೆ ಕರೆ ಮಾಡಿ , ಅಳುತ್ತ, ನನಗೆ ಜೀವನ ಮಾಡಲು ಆಗುತ್ತಿಲ್ಲ, ನಾನು ಸಾಯುತ್ತೇನೆ ಎಂದು ನನ್ನ ಮುಂದೆ ಹೇಳಿದ. ಆ ದಿನ ನಾನು ಸಾಮಾಧಾನ ಮಾಡಿದೆ. ಆದರೆ ಯಾವ ಕಾರಣಕ್ಕಾಗಿ ಆತ್ಮಹತ್ಯೆ ಮಾಡಿಕೊಳ್ಳುತ್ತಿದ್ದಾನೆ ಎಂದು ನನ್ನ ಮುಂದೆ ಹೇಳಲಿಲ್ಲ. ನಂತರ ಆತನ ಫೋನ್ ಸ್ವಿಚ್ ಆಫ್ ಆಯಿತು. ಅವರ ಸಂಬಂಧದ ಬಗ್ಗೆ ಪಂಚಾಯಿತಿ ಮಾಡಿದ ವಿಚಾರ ನನಗೆ ಗೊತ್ತಿಲ್ಲ. ಪೊಲೀಸರು ನನ್ನ ಹೇಳಿಕೆ ಪಡೆದಿಲ್ಲ.

**SC No.437/2022**
**PW.5**

**(ಈ ಹಂತದಲ್ಲಿ ಸರ್ಕಾರಿ ಅಭಿಯೋಜಕರು ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯನ್ನಾಗಿ ಪರಿಗಣಿಸಿ ಪಾಟೀಸವಾಲು ಮಾಡಲು ಅನುಮತಿ ಕೇಳಿದ್ದು ಸಾಕ್ಷಿಯ ಸಾಕ್ಷ್ಯ ಮತ್ತು ಇತರೆ ದಾಖಲಾತಿಗಳನ್ನು ಪರಿಶೀಲಿಸಿ ಅನುಮತಿ ನೀಡಲಾಯಿತು.)**

**ಪಾಟೀಸವಾಲುಃ- ಸರ್ಕಾರಿ ಅಭಿಯೋಜಕರಿಂದಃ-**

ಗೋಪಿಕೃಷ್ಣನನು ತನ್ನ ಹೆಂಡತಿ ಸರಿಯಾಗಿ ತನ್ನ ಜೊತೆ ಸಹಕಾರ ನೀಡುತ್ತಿಲ್ಲ, ಮನೆಯಲ್ಲಿ ಸರಿಯಾಗಿ ಇರುವುದಿಲ್ಲ , ಹೇಳದೇ ಕೇಳದೇ ಮನೆ ಬಿಟ್ಟು ಹೋಗುತ್ತಾಳೆ , 1 ನೇ ಆರೋಪಿಯು ತನ್ನನ್ನು ಬಹಳ ಹಿಯಾಳಿಸುತ್ತಾಳೆ ಎಂದು ನನ್ನ ಮುಂದೆ ಹೇಳಿದ್ದ ಎಂದು ನಾನು ಪೊಲಿಸರಿಗೆ ಹೇಳಿದ್ದೆ ಎಂದರೆ ಸರಿಯಲ್ಲ. ಗೋಪಿಕೃಷ್ಣ ಕರೆ ಮಾಡಿದ ವಿಚಾರವನ್ನು ನಾನು ಅವರ ತಾಯಿಗೆ ಹೇಳಿರುತ್ತೇನೆ ಎಂದರೆ ಸರಿ . ಈಗ ಓದಿ ಹೇಳಿದಂತೆ ಪೊಲೀಸರ ಮುಂದೆ ನಿಪಿ-5 ರಂತೆ ಹೇಳಿಕೆ ನೀಡಿದ್ದರೂ ಕೂಡ ಆರೋಪಿತರಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಪಾಟೀಸವಾಲುಃ- ಆರೋಪಿತರ ಪರ ಶ್ರೀ ಈ ಬಿ ಆರ್ ವಕೀಲರಿಂದಃ-**

ಗೋಪಿಕೃಷ್ಣ ನನಗೆ ಕರೆ ಮಾಡಿಲ್ಲ ಎಂದರೆ ಸರಿಯಲ್ಲ.

**ಮರುವಿಚಾರಣೆಃ** ಇಲ್ಲ.

**ನನ್ನ ಉಕ್ತಲೇಖನದ ಮೇರೆಗೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.**

ಓ ಹೇ ಕೇ ಸರಿ ಇದೆ ಎಂದು ಒಪ್ಪಿದ ಮೇರೆಗೆ,

ಎಂಟನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಮೈಸೂರು, ಹುಣಸೂರು ಪೀಠ.